## ನಮ್ಮದೂ ‘ಹೌಸ್‌ಫುಲ್’!

‘ಹೌಸ್‌ಫುಲ್!’ (ಅ. 10, ನಳಿನಿ ಟಿ. ಭೀಮಪ್ಪ) ಹಾಸ್ಯಬರಹ ನಮ್ಮದೇ ಮನೆಯ ಯಥಾವತ್ ಚಿತ್ರಣದಂತೆ ಭಾಸವಾಯಿತು. ಮನೆಮಂದಿ ಉದಾಸೀನತೆಯ ಪರಮಾವಧಿಗೆ, ಉಡಾಫೆಗೆ ನವಿರಾಗಿ ಸೂಕ್ತ ಚುಚ್ಚುಮದ್ದು ಕೊಟ್ಟಂತಿತ್ತು.

—ಚನ್ನಬಸವ ಪುತ್ತೂರ್ಕರ ಉಡುಪಿ



## ನಿಜ ಜೀವನದ ಕನ್ನಡಿ

ಹಾಸ್ಯಲೇಖನ ಬಹಳ ಸೊಗಸಾಗಿದೆ. ಓದುತ್ತಾ ಮಂದಹಾಸ ಮೂಡಿತು. ನಮ್ಮ ಜೀವನದ ಕನ್ನಡಿಯಂತೆ ಮೂಡಿಬಂದಿದೆ.

—ಎಂ.ಎಸ್. ಪಾರ್ವತಿ, ಬೆಂಗಳೂರು

## ಮೆಚ್ಚುವಂಥ ಸಾಹಸ

‘ಕಾಯಿ ಒಡೆಯುವ ಸೈನಿಕರು!’ (ಅ. 10, ಧಾರಿಣಿ ಮಾಯಾ) ಲೇಖನ ಚೆನ್ನಾಗಿತ್ತು. ಪುರಾತನ ಕಾಲದಿಂದ ಆಧುನಿಕ ಯುಗದವರೆಗಿನ ಅನೇಕ ನಟ್ ಕ್ರ್ಯಾಕರ್‌ಗಳನ್ನು ಸಂಗ್ರಹಿಸಿ, ಮ್ಯೂಸಿಯಂ ನಿರ್ಮಿಸಿದ ಜಾರ್ಜ್ ದಂಪತಿ ಸಾಹಸ ಮೆಚ್ಚತಕ್ಕದ್ದು.

—ಶೋಭಾ ಸಂಪತ್, ಬೆಂಗಳೂರು

## ‘ಬನ್ನಿ’

ಬೇರೆ ಬೇರೆ ಹೆಸರುಗಳಿಂದ ರಾರಾಜಿಸುವ ಬನ್ನಿ ಹಬ್ಬಕ್ಕೆ ಎಲ್ಲರೂ ‘ಬನ್ನಿ’ ಎನ್ನೋಣ! ಶಮೀ (ಬನ್ನಿ) ವೃಕ್ಷವನ್ನು ‘ವಿಜಯವೃಕ್ಷ’ (ಅಪರಾಜಿತಾ) ಎಂದೂ ಕರೆಯಲಾಗುತ್ತದೆ. ಅಂದಹಾಗೆ ಬನ್ನಿ ಶಬ್ದಕ್ಕೆ ಒಳಿತು ಎಂಬ ಅರ್ಥವೂ ಉಂಟು. ಬನ್ನಿ ಹಬ್ಬ ಬದುಕಿಗೆ ಬನಿ ತರಲಿ, ಲೇಸು ಮಾಡಲಿ!

—ಸಿಪಿಕೆ, ಮೈಸೂರು

## ‘ಪಕೋಡ’ ಸ್ವಾದ!

‘ಪರಿಮಳಕ್ಕೆ ಪದವಿಲ್ಲ’ (ಅ. 03, ಶೇಷಾದ್ರಿ ಕಿನಾರ) ನನ್ನ ಬಾಲ್ಯದ ನೆನಪು ಮಾಡಿಸಿದ ಕಥೆ. ಆಗ ತುಂಬಾ ಅಪರೂಪಕ್ಕೆ, ಸಂಜೆಯ ಖರ್ಚಿಗೆ ವಿಶೇಷವಾಗಿ ತಯಾರಾಗುತ್ತಿದ್ದ ಪಕೋಡ ಮನಸ್ಸಿಗೆ ಹಬ್ಬವನ್ನೇ ಉಂಟುಮಾಡುತ್ತಿತ್ತು. ಅದನ್ನು ತಿಂದು ಕಾಫಿ ಹೀರುತ್ತಾ ಸೂರ್ಯಾಸ್ತದ ಆನಂದ ಅನುಭವಿಸಿದ್ದು ನೆನಪಾಯ್ತು.

—ಧನ್ವಂತ್ರಿ ಡಿ., ಬೆಂಗಳೂರು

## ಓದಲಿಕ್ಕೂ ರುಚಿ

‘ಪಕೋಡ’ ಓದಲಿಕ್ಕೂ ಇಷ್ಟು ರುಚಿ ಎಂದು ತಿಳಿದದ್ದು, ಶೇಷಾದ್ರಿ ಕಿನಾರ ಅವರ ಗರಿಗರಿ ಲೇಖನದಿಂದ.

—ರಾಜಶೇಖರ

## ಹೋಯಾ ಕುರಿತು ಮತ್ತಷ್ಟು...

‘ಹೋಯಾ: ಸಸ್ಯಪ್ರೇಮಿಗಳ ಹೊಸ ಆಯ್ಕೆ’ (ಅ. 03, ಸೀಮಾ ಹೆಗಡೆ) ಲೇಖನ ಓದಿ ಸಂತೋಷವಾಯ್ತು. ‘ಹೋಯಾ’ ಈಗ ಕೈತೋಟಗಳಲ್ಲಿ ಬೆಳೆಯುವ ಸಸ್ಯವಾದರೂ, ಇದು ನಮ್ಮ ಮಲೆನಾಡಿನ ದೊಡ್ಡ ಮರಗಳ ಕೊಂಬೆಗಳಲ್ಲಿ ಅಪ್ಪು ಸಸ್ಯಗಳಾಗಿ ನೈಸರ್ಗಿಕವಾಗಿ ಬೆಳೆಯುತ್ತದೆ. ಇದು ‘ಹೋಯಾ ವೈಟ್ಟಿ’ ಎಂಬ ಪ್ರಭೇದ. ಹೋಯಾ, ನಾವು ಸಾಮಾನ್ಯವಾಗಿ ನೋಡುವ ‘ಎಕ್ಕ’ದ ಗಿಡದ ಜಾತಿಯಾದ ‘ಆಸ್ಕ್ಲೆಪಿಯಡೇಸಿ’ ಸಸ್ಯ ಸಂಸಾರಕ್ಕೆ ಸೇರಿದೆ. ಸೀಮಾ ಹೆಗಡೆ ಮತ್ತು ಕರ್ನಾಟಕದ ವೃಕ್ಷ ಸಂಪತ್ತನ್ನು ಪರಿಚಯಿಸುತ್ತಿರುವ ವಿನು ಗಂಗೆ ಅವರಿಗೆ, ಪ್ರತಿವಾರ ‘ಪ್ರಶ್ನಾಂಕಣ’ದಲ್ಲಿ ಪ್ರಕೃತಿಯ ವಿದ್ಯಮಾನಗಳನ್ನು ಓದುಗರಿಗೆ ಅರ್ಥವಾಗುವಂತೆ ಬರೆಯುತ್ತಿರುವ ವಾಸುದೇವ್ ಅವರಿಗೆ ನನ್ನ ಅಭಿನಂದನೆ.

—ಪದ್ಮಾ ಶ್ರೀರಾಮ




## ಸಿನಿಮಾರಂಗದ ಒಳಸುಳಿಗಳು

‘ಚಂದನವನದಲ್ಲಿ ಕಾಮಣ್ಣರಿಲ್ಲವೇ?’ (ಅ. 10, ಸುಮಲತಾ ಎನ್.) ಮುಖಪುಟ ಲೇಖನ ಸಿನಿಮಾ ಜಗತ್ತಿನಲ್ಲಿ ಮಹಿಳೆಯರ ಮೇಲೆ ನಡೆಯುವ ಕ್ರೌರ್ಯ, ಹಿಂಸೆಗಳ ಒಳಸುಳಿಗಳನ್ನು ಬಿಚ್ಚಿಟ್ಟಿದೆ. ತೆರೆಯ ಮೇಲೆ ಗ್ಲಾಮರಸ್ ಆಗಿ ಕಾಣುವ ಸಿನಿಮಾ, ತೆರೆಯ ಹಿಂದೆ ಇಷ್ಟೊಂದು ಸಂಕಟ, ನೋವಿನಿಂದ ಕೂಡಿರುವುದು ಅನೇಕರಿಗೆ ಗೊತ್ತಿಲ್ಲದ ವಿಚಾರ. ಮಲೆಯಾಳಂ ಚಿತ್ರರಂಗದಲ್ಲಿ ಆಗುತ್ತಿರುವ ಮಹಿಳೆಯರ ದೌರ್ಜನ್ಯದ ಅಧ್ಯಯನಕ್ಕೆ ರಚಿಸಿರುವ ಹೇಮಾ ಸಮಿತಿ ಸ್ವಾಗತಾರ್ಹ. ಸಿನಿಜಗತ್ತಿನೊಳಗಿನ ವಾಸ್ತವಿಕತೆಗೆ ಕನ್ನಡಿ ಹಿಡಿದಿರುವ ಬರಹ.

—ಗೌರಿ, ಬೆಂಗಳೂರು

## ಕೂಗು ಎಲ್ಲೆಡೆ ಮೊಳಗಲಿ

ಇಂತಹ ಸಮಿತಿ ರಚನೆ ಕೇವಲ ಸಿನಿಮಾಕ್ಷೇತ್ರಕ್ಕೆ ಮಾತ್ರ ಸೀಮಿತವೇ? ಇಂದು ರಾಜಕೀಯ ಕ್ಷೇತ್ರ, ಕಿರುತೆರೆ, ಕ್ರೀಡೆ ಮುಂತಾದ ಹಲವು ಕ್ಷೇತ್ರಗಳಲ್ಲಿ ನಿರಂತರವಾಗಿ ಮಹಿಳೆಯರ ಶೋಷಣೆ, ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಸಿನಿಮಾರಂಗಕ್ಕೆ ಮಾತ್ರವಲ್ಲದೆ ಎಲ್ಲ ರಂಗದಲ್ಲೂ ಈ ಕೂಗು ಮೊಳಗಬೇಕು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಕಟುಸತ್ಯಗಳ ಅನಾವರಣ

‘ಬೆಟ್ಟದ ತುದಿಯಲ್ಲಿ ಊರು; ಶಾಲಾ ಮಕ್ಕಳಿಗೆ ಇಲ್ಲ ಸೂರು’ (ಅ. 10, ಎಂ.ಜಿ. ನಾಯ್ಕ) ಲೇಖನ ಕಟುಸತ್ಯಗಳ ಅನಾವರಣ. ನಾನು 80ರ ದಶಕದಲ್ಲಿ ಕುಮಟಾ ತಾಲ್ಲೂಕಿನ ತಹಸೀಲ್ದಾರನಾಗಿ ಸೇವೆ ಸಲ್ಲಿಸುತ್ತಿದ್ದೆ. ಆಗ ಕುಮಟಾ ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ತಾಲ್ಲೂಕು ಮಟ್ಟದ 30–40 ಅಧಿಕಾರಿಗಳ ತಂಡ ಸುಮಾರು ಏಳು ಕಿ.ಮೀ. ಘಟ್ಟದ ದಾರಿ ಹತ್ತಿ ಮೇದಿನಿ ಗ್ರಾಮಕ್ಕೆ ಭೇಟಿ ಕೊಟ್ಟು ಒಂದು ದಿನ ವಾಸ್ತವ್ಯ ಮಾಡಿತು. ಹಳ್ಳಿ ಜನರು ಕೇಳಿಕೊಂಡ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ಭರವಸೆ ನೀಡಿ ಅವರು ನೀಡಿದ ಯಥೇಚ್ಛ ಆತಿಥ್ಯ ಸ್ವೀಕರಿಸಿತು. ಮೇದಿನಿ ಗ್ರಾಮದ ಸಕಲ ಸೃಷ್ಟಿ



ಸೌಂದರ್ಯದ ಸವಿ ಉಣ್ಣುತ್ತಾ ತಿರುಗಿ ಬಂದ ನಂತರ ಆ ಗ್ರಾಮದ ಅಭಿವೃದ್ಧಿಯನ್ನೇ ಮರೆತ ಅಧಿಕಾರಿಗಳಲ್ಲಿ ನಾನೂ ಒಬ್ಬ ಎಂದು ಬರೆಯಲು ತುಂಬಾ ವಿಷಾದವಾಗುತ್ತಿದೆ. ನಾಲ್ಕು ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಸಹ ಮೇದಿನಿ ಗ್ರಾಮಕ್ಕೆ ಭೇಟಿ ಕೊಟ್ಟು ಬಂದಿರುವುದಾಗಿ ಓದಿದೆ. ಆದರೆ ಮೇದಿನಿ ಗ್ರಾಮ ಹಿಂದಿನ ಸ್ಥಿತಿಗತಿಗಿಂತ ಮತ್ತೂ ಕೀಳಾಗಿ ಕುಗ್ರಾಮವಾಗಿರುವ ಕಟುಸತ್ಯ ಓದಿದಾಗ ನಾವು ಅಧಿಕಾರಿಗಳು ಮಾಡಿದ ಅಪರಾಧಕ್ಕೆ ತುಂಬಾ ನೋವಾಗುತ್ತಿದೆ.

—ಎಸ್.ವಿ. ನಾಯ್ಕ್, ರಾಣಿ ಧಾರ್ವಾಡ್ ಕಿನ್ನರ್

## ಶಾಶ್ವತ ಪರಿಹಾರ ಕಂಡುಕೊಳ್ಳಬೇಕು

ಇಂತಹ ಸಮಸ್ಯೆಗಳಿರುವ ಶಾಲೆಗಳು ನಮ್ಮ ರಾಜ್ಯದಲ್ಲಿ ಅನೇಕ ಭಾಗಗಳಲ್ಲಿವೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ದೇಶದ ಭವಿಷ್ಯವಾಗಿರುವ ಮಕ್ಕಳ ಭವಿಷ್ಯವೇ ಸುಭದ್ರವಾಗಿಲ್ಲದಿದ್ದರೆ ಹೇಗೆ? ಶಿಕ್ಷಣಕ್ಕೆ ಆದ್ಯತೆ ನೀಡಿ ಎಂಬುದು ನನ್ನ ಮನವಿ.

—ಶ್ರೀಕಾಂತ್ ಎಲ್.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in